**ದಿನಾಂಕಃ 16/08/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಆರೋಪಿತರ ಪರ ಶ್ರೀ. ಎ ಪಿ ವಕೀಲರಿಂದಃ**

6. ನಾನು ಬ್ಯಾಂಕ್ ಆಫ್ ಬರೋಡಾದ ಖಾತೆಯ 2017 ರಿಂದ 2024 ರವರೆಗಿನ ಸ್ಟೇಟ್ ಮೆಂಟ್ ಹಾಜರುಪಡಿಸಿರುತ್ತೇನೆ. ಅದರ ಹಿಂದಿನ ವಿಜಯ ಬ್ಯಾಂಕಿನ ಸ್ಟೇಟ್ ಮೆಂಟ್ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ತಿಳಿಸಿದ್ದಾರೆ. ಆ ರೀತಿಯ ಹಿಂಬರಹವನ್ನು ಹಾಜರುಪಡಿಸಿರುತ್ತೇನೆ. ಆರ್.ಟಿ.ಸಿ. ಗಳು ನನ್ನ ತಾಯಿಯ ಹೆಸರಿನಲ್ಲಿದೆ. ಸಾಕ್ಷಿಯು ಮುಂದುವರೆದು ಈ ತಿಂಗಳಿನಿಂದ ಸದರಿ ಸ್ವತ್ತಿಗಳ ಆರ್.ಟಿ.ಸಿ.ಗಳು ನನ್ನ ಹೆಸರಿಗೆ ಆಗಿದೆ ಎಂದು ನುಡಿಯುತ್ತಾರೆ. ನನ್ನ ತಾಯಿಗೆ ನಾನು ಮತ್ತು ನನ್ನ ಅಕ್ಕ ಇಬ್ಬರು ಮಕ್ಕಳು. ಸದರಿ ಸ್ವತ್ತುಗಳನ್ನು ನಾನು ನನ್ನ ಅಕ್ಕ ಮತ್ತು ನನ್ನ ತಾಯಿ ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆದರೆ ಈಗ ನನ್ನ ಅಕ್ಕ ಮತ್ತು ತಾಯಿ ನನಗೆ ಹಕ್ಕು ಖುಲಾಸೆ ಬರೆದುಕೊಟ್ಟಿದ್ದಾರೆ. ನನಗೆ ಯಾವುದೇ ಹಕ್ಕು ಖುಲಾಸೆ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಪಾಲಿಗೆ ಬಂದ ಜಮೀನಿನಲ್ಲಿ ಆರೋಪಿತನಿಗೆ ಸಾಲ ನೀಡುವಷ್ಟು ಹಣ ಗಳಿಸಲು ನಾನು ಶಕ್ತನಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತನಿಂದ ಅನ್ಯತಾ ಪಾಯಿದೆ ಹೊಂದಲು ಸುಳ್ಳು ದೂರನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**

**ಪಿರಿಯಾಪಟ್ಟಣ.**